2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 13/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಂಜುಳಾ | ಪಿಡಬ್ಲೂ -1 |
| ಗಂಡನ ಹೆಸರು | - | ಉಮಾಶಂಕರ್ | ಸಿಡಬ್ಲೂ -1 |
| ವಯಸ್ಸು | - | 30 ವರ್ಷ | |
| ಉದ್ಯೋಗ | - | ಡಿ ದರ್ಜೆ ನೌಕರಿ, ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಕಡೂರು | |
| ವಾಸ ಸ್ಥಳ | - | ಕಡೂರು | |

ದಿನಾಂಕಃ 12.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ನನ್ನ ಗಂಡ. ಚಾಸಾ.2 ರಿಂದ ಚಾಸಾ.5 ಗೊತ್ತು, ಅವರು ನಮ್ಮ ಅಕ್ಕಪಕ್ಕದ ಮನೆಯವರು. ಚಾಸಾ.6 ನನ್ನ ಅಕ್ಕ. ಚಾಸಾ.7 ನನ್ನ ಚಿಕ್ಕಮ್ಮ. ಚಾಸಾ.9 ಗೊತ್ತು, ಆಕೆ ನಮ್ಮ ಮಗುವನ್ನು ನೋಡಿಕೊಳ್ಳಲು ನಮ್ಮ ಮನೆಯಲ್ಲಿ ಕೆಲಸಕ್ಕೆ ಇದ್ದಳು. ಚಾಸಾ.10, ಚಾಸಾ.14 ರವರು ನಮ್ಮ ಮನೆಯ ಎದುರಿಗೆ ವಾಸವಿದ್ದಾರೆ. ಚಾಸಾ.7 ನನ್ನ ಚಿಕ್ಕಮ್ಮನ ಮಗಳು. ಚಾಸಾ.12 ರವರು ಚಾಸಾ.11 ರವರ ಗಂಡ. ಚಾಸಾ.13 ನನ್ನ ಸಂಬಂಧಿ. ಚಾಸಾ.16 ಗೊತ್ತಿಲ್ಲ. ಚಾಸಾ.18 ನನ್ನ ದೊಡ್ಡಮ್ಮ. ಚಾಸಾ.17 ಗೊತ್ತು. ಉಳಿದ

ಸಾಕ್ಷಿದಾರರು ಗೊತ್ತಿಲ್ಲ.

2. ನಾನು ಈಗ್ಗೆ 13 ವರ್ಷಗಳಿಂದ ನ್ಯಾಯಾಂಗ ಇಲಾಖೆಯಲ್ಲಿ ಗ್ರೂಪ್ ಡಿ ನೌಕರಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕಳೆದ 6 ವರ್ಷಗಳಿಂದ ನಾನು ಕಡೂರಿನ ನ್ಯಾಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗ್ಗೆ 6 ವರ್ಷಗಳ ಹಿಂದೆ ನಾನು ಮತ್ತು ಆರೋಪಿ ಪ್ರೀತಿಸಿ ಬಾಣಾವಾರದ ಸಮೀಪವಿರುವ ಗಂಜಿಗೆಪುರದಲ್ಲಿರುವ ಲಕ್ಷ್ಮಿರಂಗನಾಥ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿದ್ದೆವು. ಆರೋಪಿ ಕಡೂರಿನಲ್ಲಿ ವಕೀಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆರೋಪಿ ಮೂಲತಃ ಕಡೂರಿನವನಾಗಿದ್ದು, ಅಲ್ಲಿಯೇ ಆತನಿಗೆ ಸೇರಿದ ಸ್ವಂತ ಮನೆ ಇದೆ.

3. ನಾನು ಆರೋಪಿಯನ್ನು ಮದುವೆ ಮಾಡಿಕೊಳ್ಳುವ 5 ವರ್ಷಗಳ ಹಿಂದೆ ನನ್ನ ಮದುವೆ ಬೇರೆಯವರೊಂದಿಗೆ ನಡೆದಿತ್ತು, ಆದರೆ ಸದರಿ ಮದುವೆ ವಿಚ್ಛೇದನದಲ್ಲಿ ಅಂತ್ಯವಾಗಿತ್ತು. ನನಗೆ ಮೊದಲನೇ ಮದುವೆಯಿಂದ ಯಾವುದೇ ಮಕ್ಕಳು ಇರಲಿಲ್ಲ. ಆರೋಪಿಯಿಂದ ನಾನು ದಿನಾಂಕ 06.01.2020 ರಂದು ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದೆನು. ಆಕೆಯ ಹೆಸರು ಲೋಲಾಕ್ಷಿ. ನಾನು ಆರೋಪಿಯನ್ನು ಮದುವೆ ಮಾಡಿಕೊಂಡ ಬಳಿಕ ನಾನು ಆತನೊಂದಿಗೆ ಕಡೂರಿನ ದೊಡ್ಡಪೇಟೆಯಲ್ಲಿರುವ ಆತನ ಸ್ವಂತ ಮನೆಯಲ್ಲಿ ವಾಸವಾಗಿದ್ದೆನು. ಆ ಸಮಯದಲ್ಲಿ ಕೇವಲ ನಾನು ಮತ್ತು ಆರೋಪಿ ಸದರಿ ಮನೆಯಲ್ಲಿ ವಾಸವಾಗಿದ್ದೆವು.

4. ನನಗೆ ಮಗು ಜನಿಸುವ ಪೂರ್ವದಲ್ಲಿ ಮತ್ತು ನಂತರದಲ್ಲಿಯೂ

ಸಹ ನಾನು ಮತ್ತು ಆರೋಪಿ ಅನ್ಯೂನ್ಯವಾಗಿದ್ದೆವು. ನಾನು ಬಾಣಂತನಕ್ಕೆಂದು ಬೆಂಗಳೂರಿನಲ್ಲಿರುವ ನನ್ನ ತಂಗಿ ರೇಖಾರವರ ಮನೆಗೆ ಹೋಗಿ 3 ತಿಂಗಳು ಇದ್ದು ಬಂದೆನು. ನಂತರ ನನ್ನ ಮಗುವಿಗೆ 6 ತಿಂಗಳಾದ ಬಳಿಕ ನಾನು ಕೆಲಸಕ್ಕೆ ವಾಪಾಸ್ಸು ಹೋಗಬೇಕಾಗಿದ್ದರಿಂದ ನನ್ನ ತಂಗಿ ಮಗುವನ್ನು ನೋಡಿಕೊಳ್ಳಲು ಚಾಸಾ.9 ರವರನ್ನು ನಮ್ಮ ಮನೆಗೆ ಕೆಲಸಕ್ಕೆಂದು ಕಳುಹಿಸಿಕೊಟ್ಟಿದ್ದಳು. ನಂತರ ನಾನು ಚಾಸಾ.9 ರವರೊಂದಿಗೆ ನನ್ನ ಮಗುವನ್ನು ಬಿಟ್ಟು ಕೆಲಸಕ್ಕೆ ಹೋಗಿ ಬರುತ್ತಿದ್ದೆನು.

5. ದಿನಾಂಕ 10.09.2020 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ಮಗುವಿಗೆ ಹಾಲುಣಿಸಿ ಅದನ್ನು ನೋಡಿಕೊಳ್ಳಲು ಚಾಸಾ.9 ರವರಿಗೆ ಹೇಳಿ ನನ್ನ ಕೆಲಸಕ್ಕೆ ಹೋದೆನು. ಆ ದಿನ ನಾನು ಕೆಲಸಕ್ಕೆಂದು ಮನೆಯಿಂದ ಹೊರಟಾಗ ನನ್ನ ಗಂಡ ಮನೆಯಲ್ಲಿಯೇ ಇದ್ದರು. ಆ ದಿನ ಮಧ್ಯಾಹ್ನ 1.00 ಗಂಟೆಗೆ ನಾನು ಕೋರ್ಟಿನಲ್ಲಿದ್ದಾಗ ನಮ್ಮ ಮನೆಯ ಎದುರಿಗೆ ವಾಸವಿರುವ ಚಾಸಾ.14 ರವರು ನನಗೆ ಫೋನ್ ಮಾಡಿದ್ದರು ಆದರೆ ಅದನ್ನು ನಾನು ನೋಡಿಕೊಂಡಿರಲಿಲ್ಲ. ಅದಾದ 5 ನಿಮಿಷಕ್ಕೆ ಚಾಸಾ.14 ರವರು ಕೋರ್ಟಿನ ಹತ್ತಿರ ಬಂದು ನನ್ನ ಮಗು ನೀರಿಗೆ ಬಿದ್ದಿರುವುದಾಗಿ ತಿಳಿಸಿ ಬಂದು ನೋಡಿ ಎಂದು ಕರೆದರು. ಆಗ ನಾನು ಚಾಸಾ.14 ರವರೊಂದಿಗೆ ಅವರ ಬೈಕಿನಲ್ಲಿಯೇ ನಮ್ಮ ಮನೆಗೆ ಹೋದೆನು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ನನ್ನ ಮಗಳನ್ನು ಚಾಸಾ.9 ಮತ್ತು ಅಕ್ಕಪಕ್ಕದ ಮನೆಯವರು ಸೇರಿ ಕಡೂರಿನಲ್ಲಿ ನಮ್ಮ ಮನೆಯ ಹಿಂಭಾಗದಲ್ಲಿರುವ ಲಕ್ಷ್ಮಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು.

ನಾನು ಕೂಡಲೇ ಸದರಿ ಆಸ್ಪತ್ರೆಗೆ ಹೋದೆನು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ನನ್ನ ಮಗಳು ಮೃತಪಟ್ಟಿದ್ದಳು. ಆಗ ಆಕೆಗೆ 8 ತಿಂಗಳು ತುಂಬಿ 9 ತಿಂಗಳಿಗೆ ಬಿದ್ದಿತ್ತು. ಆಗ ನಾನು ಚಾಸಾ.9 ರವರನ್ನು ಕುರಿತು ನನ್ನ ಮಗಳಿಗೆ ಏನಾಯಿತು ಎಂದು ಕೇಳಿದೆನು. ಆಗ ಚಾಸಾ.9 ರವರು ನಮ್ಮ ಮನೆಯ ಹಾಲಿನಲ್ಲಿ ಕಟ್ಟಿದ್ದ ಜೋಲಿಯಲ್ಲಿ ಮಗುವನ್ನು ಮಲಗಿಸಿದ್ದಾಗಿ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲವೆಂದು ನಂತರ ಮಗು ಸುಮಾರು 10 ಲೀಟರ್ ಬಕೆಟ್ ನಲ್ಲಿದ್ದ ನೀರಿಗೆ ಜೋಲಿಯಿಂದ ಬಿದ್ದು ಮೃತಪಟ್ಟಿದ್ದಾಗಿ ತಿಳಿಸಿದರು. ಆ ಸಮಯದಲ್ಲಿ ಆರೋಪಿ ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಆತನಿಗೆ ಫೋನ್ ಮಾಡಿದೆನು ಆದರೆ ಆತನ ಫೋನ್ ಸ್ವಿಚ್ ಆಫ್ ಆಗಿತ್ತು.

6. ನಂತರ ಕಡೂರು ಪೊಲೀಸರು ಅದೇ ದಿನ ಲಕ್ಷ್ಮಿ ಆಸ್ಪತ್ರೆಗೆ ಬಂದು ನನ್ನನ್ನು ತಮ್ಮ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ಆರೋಪಿ ಇದ್ದನು. ಆತ ಅಲ್ಲಿ ಯಾಕೆ ಇದ್ದನು ಎಂದು ನನಗೆ ಗೊತ್ತಿಲ್ಲ. ನಂತರ ಪೊಲೀಸರು ದೂರನ್ನು ಬರೆದುಕೊಂಡು ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು. ಆಗ ನಾನು ತುಂಬಾ ದುಃಖದಲ್ಲಿದ್ದ ಕಾರಣ ದೂರಿನಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಳ್ಳದೇ ಸಹಿ ಮಾಡಿದ್ದೇನೆ.

7. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ದಿನಾಂಕ 10.09.2020 ರಂದು ಸಾಕ್ಷಿಯು ಪೊಲೀಸರಿಗೆ ನೀಡಿದ್ದಾರೆ ಎಂದು ಹೇಳಲಾದ ದೂರಾಗಿದ್ದು

ಅದನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

8. ನಿಪಿ.1 ನನ್ನ ಬರವಣಿಗೆಯಲ್ಲಿರುತ್ತದೆ. ನನ್ನ ಮಗುವಿನ ಶವವನ್ನು ಲಕ್ಷ್ಮಿ ಆಸ್ಪತ್ರೆಯಿಂದ ಕಡೂರು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕಳುಹಿಸಲಾಯಿತು.

9. ಸಾಕ್ಷಿಗೆ ನಾಲ್ಕು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಕಂಡು ಬರುವ ಶವ ತನ್ನ ಮಗು ಲೋಲಾಕ್ಷಿಯದ್ದು ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.3 ರಿಂದ ನಿಪಿ.6 ಎಂದು ಗುರುತಿಸಲಾಯಿತು. ನಿಪಿ.3 ರಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

10. ನನ್ನ ಮಗು ನೀರಿಗೆ ಬಿದ್ದಿದೆ ಎಂದು ತಿಳಿದು ಮನೆಗೆ ಹೋಗಿ ನೋಡಿದಾಗ ನಮ್ಮ ಮನೆಯ ಹಾಲಿನಲ್ಲಿ ಕಟ್ಟಿದ್ದ ಜೋಲಿಯ ಪಕ್ಕದಲ್ಲಿ ಪೇಂಟಿನ ಒಂದು ಬಕೆಟ್ ಇತ್ತು, ಅದನ್ನು ನಾವು ಮನೆಯನ್ನು ಹೊರೆಸಲು ಮತ್ತು ನೀರನ್ನು ತುಂಬಲು ಬಳಸುತ್ತಿದ್ದೆವು.

11. ಸದರಿ ಬಕೆಟನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಕೆಟ್ ಇದೆ ಎಂದು ಹೇಳಿ ಬಿಳಿಯ ಬಟ್ಟೆಯಲ್ಲಿ ಹೊಲೆದು ಸೀಲು ಮಾಡಲಾಗಿದ್ದನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ

ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿದ್ದ ಒಂದು ಬಿಳಿಯ ಬಣ್ಣದ ಖಾಲಿ ಬಕೆಟನ್ನು ನೋಡಿ ಅದನ್ನು ನಮ್ಮ ಮಗುವಿನ ಜೋಲಿಯ ಪಕ್ಕದಲ್ಲಿ ಇದ್ದ ಬಕೆಟ್ ಅದೇ ಎಂದು ಗುರುತಿಸಿದ ಮೇರೆಗೆ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

12. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತಮ್ಮ ಮನೆಯ ಹಾಲಿನಲ್ಲಿ ನಮ್ಮ ಮಗುವನ್ನು ಮಲಗಿಸುತ್ತಿದ್ದ ಜೋಲಿ ಮತ್ತು ಅದರ ಪಕ್ಕದಲ್ಲಿ ಮೇಲೆ ಹೇಳಿದ ಮು.ಮಾ.1 ಬಕೆಟ್ ಇರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು.

13. ನಂತರ ನನ್ನ ಮಗುವಿನ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು. ದಿನಾಂಕ 11.09.2020 ರಂದು ಸದರಿ ಆಸ್ಪತ್ರೆಯಲ್ಲಿ ನನ್ನ ಮಗುವಿನ ಮರಣೋತ್ತರ ಪರೀಕ್ಷೆಯನ್ನು ನಡೆಸಿ ಶವವನ್ನು ನಮಗೆ ಕೊಟ್ಟರು. ನಂತರ ಅದೇ ದಿನ ನಾವು ಅಂತ್ಯ ಸಂಸ್ಕಾರವನ್ನು ಮಾಡಿರುತ್ತೇವೆ.

14. ನಂತರ ನಾನು ನ್ಯಾಯಾಲಯಕ್ಕೆ ರಜೆ ಅರ್ಜಿಯನ್ನು ಸಲ್ಲಿಸಿ 1 ತಿಂಗಳ ಕಾಲ ರಜೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಅರ್ಜಿಗಳ ದೃಢೀಕೃತ ನಕಲನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.8 ಮತ್ತು ನಿಪಿ.9 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.8(ಎ) ಮತ್ತು ನಿಪಿ.9(ಎ) ಎಂದು ಗುರುತಿಸಲಾಯಿತು.

15. ಸದರಿ ಅರ್ಜಿಗಳಲ್ಲಿರುವ ಬರವಣಿಗೆ ನನ್ನದಾಗಿರುತ್ತದೆ. ಸದರಿ ಅರ್ಜಿಯಲ್ಲಿ ದಿನಾಂಕ 10.09.2020 ರಂದು ನನ್ನ 8 ತಿಂಗಳ ಮಗುವಿನ ಕೊಲೆಯಾಗಿದ್ದು, ಅದರಿಂದಾಗಿ ನಾನು ಮಾನಸಿಕವಾಗಿ ನೊಂದಿರುತ್ತೇನೆಂದು ತಿಳಿಸಿ ಕಛೇರಿಗೆ ಬರಲು ಸಾಧ್ಯವಾಗುತ್ತಿಲ್ಲವೆಂದು ಹೇಳಿ ರಜೆಯನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತೇನೆ.

16. ಒಂದು ತಿಂಗಳು ರಜೆಯನ್ನು ಮುಗಿಸಿಕೊಂಡು ದಿನಾಂಕ 09.10.2020 ರಂದು ನಾನು ಪುನಃ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನಾನು ರಜೆಯಲ್ಲಿದ್ದ ಸಮಯದಲ್ಲಿ ಒಂದು ದಿನ ಕಡೂರಿನ ವೃತ್ತ ನಿರೀಕ್ಷಕರು ನನ್ನನ್ನು ಕರೆದಿದ್ದರಿಂದ ನಾನು ಸದರಿಯವರ ಕಛೇರಿಗೆ ಹೋಗಿದ್ದೆನು. ಆ ದಿನ ಸದರಿ ವೃತ್ತ ನಿರೀಕ್ಷಕರು ಕೇಳಿದ ಮೇರೆಗೆ ನನ್ನ ಮತ್ತು ಆರೋಪಿಯ ಮದುವೆಯ ಫೋಟೋಗಳು, ಮದುವೆಯ ನೊಂದಣಿ ಪತ್ರ ಮತ್ತು ಆ ಸಮಯದಲ್ಲಿ ತೆಗೆದ ಫೋಟೋವನ್ನು ನಾನು ಅವರಿಗೆ ನೀಡಿರುತ್ತೇನೆ.

17. ಸದರಿ ನೋಂದಣಿ ಪತ್ರ ಮತ್ತು ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.10 ಮತ್ತು ನಿಪಿ.11 ಎಂದು ಗುರುತಿಸಲಾಯಿತು.

18. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿ ಅದನ್ನು ನಾನು ಮೇಲೆ ಹೇಳಿದಂತೆ ನನ್ನ ಮತ್ತು ಆರೋಪಿಯ ಮದುವೆಯ ನೋಂದಣಿ ಪತ್ರ ಮತ್ತು ಫೋಟೋವನ್ನು ಪೊಲೀಸರಿಗೆ ಹಾಜರುಪಡಿಸಿದ ಸಮಯದಲ್ಲಿ ಅವರು

ಮಹಜರ್ ಮಾಡಿಕೊಂಡು ಅದಕ್ಕೆ ಸದರಿ ಸಹಿಯನ್ನು ಪಡೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ.12 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು.

19. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಮೇಲೆ ಹೇಳಿದಂತೆ ಪೊಲೀಸರು ಮಹಜರ್ ಮಾಡಿಕೊಳ್ಳುವ ಸಮಯದಲ್ಲಿ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.13 ಎಂದು ಗುರುತಿಸಲಾಯಿತು.

20. ಆರೋಪಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆರೋಪಿಯಿಂದ ನನಗೆ ಮತ್ತು ನನ್ನ ಮಗುವಿಗೆ ಯಾವುದೇ ತೊಂದರೆಯಾಗಿಲ್ಲ. ನನ್ನ ಮಗುವಿನ ಸಾವಿನ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನನಗೆ ಇಲ್ಲಿಯವರೆಗೂ ನನ್ನ ಮಗುವಿನ ಸಾವಿಗೆ ಕಾರಣವೇನೆಂದು ಮತ್ತು ಯಾರು ಕಾರಣರೆಂದು ತಿಳಿದುಬಂದಿಲ್ಲ. ನನ್ನ ಮಗುವಿನ ಶವದ ಮೇಲೆ ನನಗೆ ಯಾವುದೇ ಗಾಯಗಳು ಕಂಡು ಬಂದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

21. ನನಗೆ ಹೆಣ್ಣು ಮಗು ಜನಿಸಿದ ಕಾರಣಕ್ಕೆ ನನ್ನ ಮಗಳು ಜನಿಸಿದಾಗಿನಿಂದ ನನ್ನ ಗಂಡನಾದ ಆರೋಪಿ ನನಗೆ ಕಿರುಕುಳ

ಕೊಡಲು ಶುರು ಮಾಡಿದ್ದನು ಎಂದರೆ ಸರಿಯಲ್ಲ. ನಾನು ನನ್ನ ತಂಗಿ ರೇಖಾಳ ಮನೆಯಿಂದ ಬಾಣಂತನವನ್ನು ಮುಗಿಸಿಕೊಂಡು ನನ್ನ ಗಂಡನ ಮನೆಗೆ ಬಂದಾಗ ಮಗುವನ್ನು ಕರೆದುಕೊಂಡು ಬರುವುದಾದರೆ ನಮ್ಮ ಮನೆಗೆ ಬರಬೇಡವೆಂದು ಆತ ನನ್ನೊಂದಿಗೆ ಜಗಳ ತೆಗೆದು ನನಗೆ ಆತನ ಮನೆಗೆ ಹೋಗಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

22. ಆಗ ನನ್ನ ತಂಗಿ ರೇಖಾ ಮತ್ತು ಆಕೆಯ ಗಂಡನಾದ ಚಂದ್ರಹಾಸರವರು ಬಂದು ಆರೋಪಿಗೆ ಬುದ್ಧಿ ಹೇಳಿ ನನ್ನನ್ನು ಆತನ ಮನೆಗೆ ಬಿಟ್ಟು ಹೋಗಿದ್ದರು ಎಂದರೆ ಸರಿಯಲ್ಲ. ಅಂದಿನಿಂದ ಆರೋಪಿ ನನಗೆ ಕಿರುಕುಳ ನೀಡಲು ಶುರು ಮಾಡಿದ್ದನು ಎಂದರೆ ಸರಿಯಲ್ಲ. ಮಗುವನ್ನು ಮಾರಿ ಬಿಡೋಣ ನನಗೆ ಹೆಣ್ಣು ಮಗು ಬೇಡ ಎಂದು ಆಗ್ಗಾಗ್ಗೆ ಆರೋಪಿ ಹೇಳುತ್ತಿದ್ದನು ಎಂದರೆ ಸರಿಯಲ್ಲ. ಆಗ ನಾನು ನೀನು ಮಗುವನ್ನು ನೋಡಿಕೊಳ್ಳದಿದ್ದರೂ ಪರವಾಗಿಲ್ಲ ನಾನೇ ಮಗುವನ್ನು ಸಾಕುತ್ತೇನೆ ಎಂದು ಆರೋಪಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ವಿಚಾರದಲ್ಲಿ ಆಗಾಗ್ಗೆ ಆರೋಪಿ ನನಗೆ ಹೊಡೆದು, ಅವಾಚ್ಯ ಶಬ್ದಗಳಿಂದ ಬೈದು ಹಿಂಸಿಸುತ್ತಿದ್ದನು ಎಂದರೆ ಸರಿಯಲ್ಲ. ಆಗಾಗ ಆರೋಪಿ ನನ್ನ ಮಗಳಿಗೆ ಪೀಡೆ, ಪಿಶಾಚಿ ಎಂದೆಲ್ಲಾ ಬೈದು, ಕೈಗಳಿಂದ ಹೊಡೆಯುತ್ತಿದ್ದನು ಎಂದರೆ ಸರಿಯಲ್ಲ.

23. ದಿನಾಂಕ 10.09.2020 ರಂದು ಚಾಸಾ.14 ರವರು ಮಧ್ಯಾಹ್ನ 1.15 ಗಂಟೆಗೆ ನಾನು ಕೆಲಸ ಮಾಡುತ್ತಿದ್ದ ಕೋರ್ಟಿನ ಹತ್ತಿರ ಬಂದಾಗ ಆರೋಪಿ ನನ್ನ ಮಗುವನ್ನು ನೀರಿನ ಬಕೆಟ್ ಗೆ

ಹಾಕಿ ಸಾಯಿಸಿ ಹೋಗಿದ್ದಾಗಿ ನಂತರ ಮಗುವನ್ನು ಲಕ್ಷ್ಮಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ತಿಳಿಸಿದರು ಎಂದರೆ ಸಾಕ್ಷಿ ಕೇವಲ ಮಗು ನೀರಿಗೆ ಬಿದ್ದಿದೆ ಎಂದು ಮಾತ್ರ ತಿಳಿಸಿದರು ಎಂದು ನುಡಿದಿರುತ್ತಾರೆ.

24. ನಾನು ಲಕ್ಷ್ಮಿ ಆಸ್ಪತ್ರೆಗೆ ಹೋಗಿ ಚಾಸಾ.9 ರವರನ್ನು ವಿಚಾರಿಸಿದಾಗ ಅವರು ಆ ದಿನ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಆರೋಪಿ ಮನೆಗೆ ಬಂದು ತನಗೆ ಬೆನ್ನು ನೋವು ಆಗಿದೆ ಎಂದು ಹೇಳಿ ಅಂಗಡಿಗೆ ಹೋಗಿ ಪ್ಲಾಸ್ಟರ್ ಪಟ್ಟಿಯನ್ನು ತರುವಂತೆ ಆಕೆಗೆ ಹಣವನ್ನು ಕೊಟ್ಟು ಕಳುಹಿಸಿದ್ದಾಗಿ, ನಂತರ ಆಕೆ ಸುಮಾರು 5 ನಿಮಿಷಕ್ಕೆ ಅಲ್ಲಿಯೇ ಹತ್ತಿರದಲ್ಲಿದ್ದ ಅಂಗಡಿಯಿಂದ ಪ್ಲಾಸ್ಟರ್ ಪಟ್ಟಿಯನ್ನು ತೆಗೆದುಕೊಂಡು ವಾಪಾಸ್ಸು ಮನೆಯ ಹತ್ತಿರ ಬಂದಾಗ ಆರೋಪಿ ಮನೆಗೆ ಬೀಗವನ್ನು ಹಾಕಿಕೊಂಡು ಹೊರಗೆ ಬಂದಿದ್ದಾಗಿ ಆಗ ಆಕೆ ಆರೋಪಿಯನ್ನು ಕುರಿತು ಮನೆಯ ಬೀಗದ ಕೀ ಕೊಡಿ ಎಂದು ಕೇಳಿದಾಗ ಮಗುವನ್ನು ನಾನು ಕೋರ್ಟಿನ ಹತ್ತಿರ ಕರೆದುಕೊಂಡು ಹೋಗಿದ್ದಾಗಿ ಆಕೆಯನ್ನೂ ಸಹ ಕೋರ್ಟಿನ ಹತ್ತಿರ ಬಿಡುವುದಾಗಿ ಹೇಳಿ ಆಕೆಯನ್ನು ಬೈಕಿನಲ್ಲಿ ಕೂರಿಸಿಕೊಂಡು ಹೋಗಿ ನಂತರ ಬೈಕನ್ನು ನಿಲ್ಲಿಸಿ ಮನೆಯ ಕೀಯನ್ನು ಆಕೆಗೆ ಕೊಟ್ಟಿದ್ದಾಗಿ ನಂತರ ಆಕೆ ವಾಪಾಸ್ಸು ಮನೆಗೆ ಹೋಗಿ ನೋಡಿದಾಗ ನನ್ನ ಮಗು ಪ್ಲಾಸ್ಟಿಕ್ ಬಕೆಟ್ ನ ನೀರಿನಲ್ಲಿ ತಲೆಕೆಳಗಾಗಿ ಮುಳುಗಿಸಿದ್ದು ಕಂಡು ಬಂದಿದ್ದಾಗಿ, ಆರೋಪಿಯೇ ಮಗುವನ್ನು ಬಕೆಟ್ ನ ನೀರಿನಲ್ಲಿ ಹಾಕಿ, ಉಸಿರುಗಟ್ಟಿಸಿ ಕೊಲೆ ಮಾಡಿರುವುದಾಗಿ ತಿಳಿಸಿದಳು ಎಂದರೆ ಸರಿಯಲ್ಲ.

25. ಸದರಿ ವಿಚಾರಗಳನ್ನು ತಿಳಿಸಿ ನನ್ನ ಮಗುವನ್ನು ಕೊಲೆ ಮಾಡಿದ ನನ್ನ ಗಂಡನಾದ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ದಿನಾಂಕ 10.09.2020 ರಂದು ಮಧ್ಯಾಹ್ನ 3.30 ಗಂಟೆಗೆ ಕಡೂರು ಪೊಲೀಸ್ ಠಾಣೆಗೆ ಹೋಗಿ ನಿಪಿ.1 ರಂತೆ ದೂರನ್ನು ನಾನೇ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ದೂರಿನ ಮೇರೆಗೆ ಪೊಲೀಸರು ನಿಪಿ.2 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದರ ಪ್ರತಿಯನ್ನು ನನಗೆ ನೀಡಿ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಮಗುವನ್ನು ಕೊಲೆ ಮಾಡಿದ್ದಾಗಿ ತಿಳಿಸಿ ನೀವೇ ನಿಮ್ಮ ಬರವಣಿಗೆಯಲ್ಲಿ ಆತನ ವಿರುದ್ಧ ನಿಪಿ.1 ರಂತೆ ಪೊಲೀಸರಿಗೆ ದೂರನ್ನು ನೀಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

26. ದಿನಾಂಕ 19.08.2020 ರಂದು ಕಡೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಅದೇ ದಿನ ನನ್ನ ಗಂಡನಾದ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿದ್ದ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಲ್ಲು ನೋವಿಗಾಗಿ ಚಿಕಿತ್ತೆ ಪಡೆದುಕೊಂಡಿದ್ದೇನೆ ಎನ್ನುತ್ತಾರೆ. ನೀವು ಆರೋಪಿಯು ಹಲ್ಲೆ ಮಾಡಿದ ಹಿನ್ನಲೆಯಲ್ಲಿ ಆ ದಿನ ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

27. ದಿನಾಂಕ 20.02.2019 ರಂದು ನಾನು ಮತ್ತು ಆರೋಪಿ ಚಿಕ್ಕಮಗಳೂರಿನ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನಮ್ಮ ಮದುವೆಯನ್ನು ನೋಂದಣಿ ಮಾಡಿಸಿಕೊಂಡಿದ್ದು ನಾನು

ಎರಡನೇ ಮದುವೆಯಾಗುತ್ತಿದ್ದುದ್ದರಿಂದ ಆ ವಿಚಾರವನ್ನು ನಮ್ಮ ಮನೆಯವರಿಗೆ ಹೇಳಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದ ಕೆಲವು ದಿನಗಳ ನಂತರ ಆರೋಪಿ ಮನೆಗೆ ಸರಿಯಾಗಿ ಬಾರದೇ ಇದ್ದ ಕಾರಣ ನಾನು ಅನುಮಾನಗೊಂಡು ವಿಚಾರಿಸಿದಾಗ ಆತನಿಗೆ ಮೊದಲೇ ಮದುವೆಯಾಗಿ ಹೆಂಡತಿ ಮತ್ತು ಒಂದು ಮಗು ಇರುವ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

28. ನಾನು ಆ ಬಗ್ಗೆ ಆರೋಪಿಯನ್ನು ಕೇಳಿದಾಗ ಆತ ನನಗೆ ಹೊಡೆದು ಸುಮ್ಮನಿರಿಸಿದ್ದಾನೆ ಎಂದರೆ ಸರಿಯಲ್ಲ. ಆರೋಪಿ ಮನೆಗೆ ಬಂದಾಗಲೆಲ್ಲಾ ಯಾವುದೇ ವಸ್ತುಗಳನ್ನು ತಂದುಕೊಡದೇ ನನ್ನಿಂದಲೇ ಹಣವನ್ನು ಕಿತ್ತುಕೊಂಡು ಹೋಗುತ್ತಿದ್ದನು ಎಂದರೆ ಸರಿಯಲ್ಲ. ನಾನು ಆತನನ್ನು ಕುರಿತು ಏನಾದರೂ ತಂದುಕೊಡುವಂತೆ ಕೇಳಿದಾಗ ಆತ ಬೇವರ್ಸಿ, ಸೂಳೆಮುಂಡೆ, ದರಿದ್ರದವಳೇ ಎಂದು ಬೈದು ಹಿಂಸೆ ನೀಡುತ್ತಿದ್ದನು ಎಂದರೆ ಸರಿಯಲ್ಲ.

29. 2019 ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿ ಆರೋಪಿ ನನಗೆ ತುಂಬಾ ಹಿಂಸೆ ನೀಡಿ ಕೈಯಿಂದ ಹೊಡೆದಿದ್ದನು ಎಂದರೆ ಸರಿಯಲ್ಲ. ದಿನಾಂಕ 06.01.2020 ರಂದು ನಾನು ಕಡೂರಿನ ಲಕ್ಷ್ಮಿ ಆಸ್ಪತ್ರೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ ಬಳಿಕ ಆರೋಪಿ ನನ್ನ ಮಗುವನ್ನು ನೋಡಲು ಬಂದಾಗಲೆಲ್ಲಾ ನನಗೆ ಬೈದು ಹೆಣ್ಣು ಮಗುವನ್ನು ಹಡದಿದ್ದೀಯಲ್ಲಾ ಬೇವರ್ಸಿ ಎಂದು ಬೈದು ಮಗುವಿನ ಮುಖವನ್ನು ನೋಡದೇ ಹಾಗೆಯೇ ಹೋಗಿದ್ದಾನೆ ಎಂದರೆ ಸರಿಯಲ್ಲ. ನಂತರ ಆತ ನನ್ನ ಫೋನ್

ಕರೆಗಳನ್ನು ಸ್ವೀಕರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

30. ಆರೋಪಿ ಮನೆಗೆ ಬಂದಾಗಲೆಲ್ಲಾ ನನಗೆ ಬೈಯ್ಯುವುದು, ಮಗುವಿಗೆ ಪೀಡೆ, ಪಿಶಾಚಿ ಎಂದು ಬೈದು ಸಣ್ಣ ಪುಟ್ಟ ಕಾರಣಗಳಿಗೆ ಹೊಡೆಯುತ್ತಿದ್ದನು ಎಂದರೆ ಸರಿಯಲ್ಲ. ನನಗೆ ಹೆಣ್ಣು ಮಗು ಬೇಡ, ಅದು ಮುಂದೆ ಬೆಳೆದರೆ ಆಸ್ತಿಯಲ್ಲಿ ಪಾಲು ಕೊಡಬೇಕಾಗುತ್ತದೆ, ಅದನ್ನು ಯಾರಿಗಾದರೂ ಮಾರಿಬಿಡೋಣ ಎಂದು ಆರೋಪಿ ಯಾವಾಗಲೂ ಹೇಳುತ್ತಿದ್ದನು ಎಂದರೆ ಸರಿಯಲ್ಲ.

31. ದಿನಾಂಕ 19.08.2020 ರಂದು ಸಂಜೆ 5.30 ಗಂಟೆಗೆ ಆರೋಪಿ ಮನೆಗೆ ಬಂದು ಮಗು ಅಳುತ್ತಿರುವುದನ್ನು ಕಂಡು ಹಾಳಾದವಳೇ ಬೇವರ್ಸಿ ಸುಮ್ಮನಿರಲು ಆಗಲ್ಲವೆ ಎಂದು ಹೊಡೆದನು ಎಂದರೆ ಸರಿಯಲ್ಲ. ಅದನ್ನು ನಾನು ಪ್ರಶ್ನಿಸಿದಾಗ ಆರೋಪಿ ನನಗೂ ಸಹ ಮುಷ್ಟಿಯಿಂದ ನನ್ನ ಕೆನ್ನೆಗೆ ಹೊಡೆದನು ಎಂದರೆ ಸರಿಯಲ್ಲ. ಅದರಿಂದ ನನ್ನ ಹಲ್ಲು ಮುರಿದು ಹೋಯಿತು ಎಂದರೆ ಸರಿಯಲ್ಲ. ಆಗ ಚಾಸಾ.9 ಮತ್ತು ಅಕ್ಕಪಕ್ಕದವರು ಸೇರಿ ಚಿಕಿತ್ಸೆಗಾಗಿ ನನ್ನನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಅಲ್ಲಿಗೆ ಕಡೂರು ಪೊಲೀಸರು ನನ್ನ ಹೇಳಿಕೆಯನ್ನು ಪಡೆಯಲು ಬಂದಾಗ ಮರ್ಯಾದೆ ಹೋಗುತ್ತದೆ ಎಂದು ತಿಳಿದು ನಾನು ದೂರನ್ನು ನೀಡದೇ ಸುಮ್ಮನಾದೆನು ಎಂದರೆ ಸರಿಯಲ್ಲ.

32. ನನಗೆ ಹುಟ್ಟಿದ ಮಗು ಎನ್ನುವ ಕಾರಣಕ್ಕೆ ಮತ್ತು ಆಕೆ ಮುಂದೆ ಆಸ್ತಿಯಲ್ಲಿ ಪಾಲು ಕೇಳುತ್ತಾಳೆ ಎಂಬ ಕಾರಣಕ್ಕೋ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಮನೆಯಲ್ಲಿ

ಯಾರೂ ಇಲ್ಲದ ಸಮಯದಲ್ಲಿ ಚಾಸಾ.9 ರವರನ್ನು ಮನೆಯಿಂದ ಹೊರಗೆ ಕಳುಹಿಸಿ ಜೋಲಿಯಲ್ಲಿ ಮಲಗಿದ್ದ ನನ್ನ ಮಗು ಲೋಲಾಕ್ಷಿಯನ್ನು ಮನೆಯಲ್ಲಿದ್ದ ನೀರು ತುಂಬಿದ ಬಕೆಟ್ ನಲ್ಲಿ ತಲೆ ಕೆಳಗಾಗಿ ಮುಳುಗಿಸಿ ಕೊಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ತಿಳಿಸಿ ದಿನಾಂಕ 12.09.2020 ರಂದು ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.14 ಎಂದು ಗುರುತಿಸಲಾಯಿತು.

33. ಕಡೂರಿನಲ್ಲಿ ತನ್ನ ಹೆಸರಿನಲ್ಲಿದ್ದ ಮನೆಯನ್ನು ಆರೋಪಿ ಈಗ್ಗೆ 3-4 ತಿಂಗಳ ಹಿಂದೆ ನನ್ನ ಹೆಸರಿಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿ ಮಾಡಿಸಿಕೊಟ್ಟಿದ್ದಾನೆ ಎಂದರೆ ಸರಿ.

34. ಸದರಿ ಆಸ್ತಿಯ ಆಮಿಷಕ್ಕೆ ಒಳಗಾಗಿ ಮತ್ತು ಆರೋಪಿ ನಿಮ್ಮ ಗಂಡನಾಗಿರುವ ಕಾರಣ ಆತನೇ ನಿಮ್ಮ ಮಗುವನ್ನು ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿದ್ದು, ಆ ಬಗ್ಗೆ ನೀವು ಪೊಲೀಸರಿಗೆ ನಿಪಿ.1 ರಂತೆ ದೂರು ಮತ್ತು ನಿಪಿ.14 ರಂತೆ ಮುಂದುವರೆದ ಹೇಳಿಕೆಯನ್ನು ನೀಡಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಶ್ರೀ ಐ ಎಸ್ ಟಿ ವಕೀಲರಿಂದಃ ಆರೋಪಿಯ ಪರವಾಗಿಃ</u>

35. ಮು.ಮಾ.1 ಬಕೆಟ್ ನಮ್ಮ ಮನೆಯಲ್ಲಿ ನೆಲವನ್ನು ಹೊರೆಸಲು ಬಳಸುತ್ತಿದ್ದ ಬಕೆಟ್ ಎಂದರೆ ಸರಿ. ಸದರಿ ಬಕೆಟ್ ನಲ್ಲಿ ನೀರನ್ನು ತುಂಬಿಸಿ ಅದಕ್ಕೆ ಬಟ್ಟೆಯನ್ನು ಹದ್ದಿ ನೆಲವನ್ನು

ಹೊರೆಸುತ್ತಿದ್ದೆವು. ನಾನು ವಿಷಯವನ್ನು ತಿಳಿದು ಮನೆಗೆ ಹೋಗಿ ನೋಡಿದಾಗ ನಮ್ಮ ಮಗುವನ್ನು ಮಲಗಿಸಲು ಕಟ್ಟಿದ್ದ ಜೋಲಿಯ ಪಕ್ಕದಲ್ಲಿಯೇ ಸದರಿ ಬಕೆಟ್ ಇರುವುದು ಕಂಡು ಬಂತು. ನನ್ನ ಮಗು ಲವಲವಿಕೆಯಿಂದ ಇತ್ತು. ನನಗೆ ತಿಳಿದಿರುವ ಪ್ರಕಾರ ಆರೋಪಿಗೆ ನಾನು ಒಬ್ಬಳೇ ಹೆಂಡತಿ.

36. ಕಡೂರು ನ್ಯಾಯಾಲಯದಲ್ಲಿ ಆರೋಪಿಗೆ ಒಳ್ಳೆಯ ಹೆಸರು ಮತ್ತು practice ಇದೆ ಎಂದರೆ ಸರಿ. ಘಟನೆ ನಡೆದಿದೆ ಎನ್ನಲಾದ ದಿನ ಆರೋಪಿ ಕಡೂರು ನ್ಯಾಯಾಲಯದಲ್ಲಿ ಪ್ರಕರಣಗಳನ್ನು ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ.14 ರವರು ಜೋಲಿಯಿಂದ ಬಕೆಟ್ ನಲ್ಲಿದ್ದ ನೀರಿಗೆ ಬಿದ್ದು ಮಗು ಮೃತಪಟ್ಟಿದೆ ಎಂದು ಹೇಳಿ ನಿಮ್ಮನ್ನು ಕರೆದಿದ್ದಾರೆ ಎಂದರೆ ಸಾಕ್ಷಿ ಮಗು ನೀರಿಗೆ ಬಿದ್ದಿದೆ ಬನ್ನಿ ಎಂದು ಹೇಳಿ ಕರೆದಿದ್ದರು ಎನ್ನುತ್ತಾರೆ. ಆಗ ನಿಮಗೆ ಗಾಬರಿಯಾಗಿದ್ದರಿಂದ ನೀವು ಆರೋಪಿಗೆ ವಿಷಯವನ್ನು ತಿಳಿಸಿಲ್ಲ ಮತ್ತು ಆತ ಎಲ್ಲಿದ್ದಾನೆಂದು ನೋಡದೇ ಕೂಡಲೇ ಮನೆಗೆ ಹೋಗಿದ್ದೀರಿ ಎಂದರೆ ಸರಿ.

37. ನಾನು ಮನೆಗೆ ಹೋದಾಗ ಚಾಸಾ.9 ಪಲ್ಲವಿರವರು ಸಹ ಮಗು ನೀರಿಗೆ ಬಿದ್ದು ಮೃತಪಟ್ಟಿದೆ ಎಂದು ತಿಳಿಸಿದ್ದಾರೆ ಮತ್ತು ಯಾರ ಮೇಲೆಯೂ ಅನುಮಾನವನ್ನು ವ್ಯಕ್ತಪಡಿಸಿಲ್ಲ ಎಂದರೆ ಸರಿ. ಆಕಸ್ಮಿಕ ಸಾವಿನ ಬಗ್ಗೆ ದೂರು ದಾಖಲಿಸಲೇಬೇಕು ಎಂದು ಹೇಳಿದ್ದರಿಂದ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು ಎಂದರೆ ಸರಿ. ಆ ಸಮಯದಲ್ಲಿ ನನಗೆ ಅತಿಯಾದ ದುಃಖ, ನೋವು ಮತ್ತು ಒತ್ತಡ ಇತ್ತು ಎಂದರೆ ಸರಿ. ಮಗು ಮೃತಪಟ್ಟಿದ್ದ

ನೋವಿನಲ್ಲಿ ಆ ಸಮಯದಲ್ಲಿ ನನಗೆ ಸ್ವತಂತ್ರ್ಯವಾಗಿ ಯೋಚಿಸುವ ಶಕ್ತಿ ಇರಲಿಲ್ಲ ಎಂದರೆ ಸರಿ. ಹಾಗಾಗಿ ಪೊಲೀಸರು ನೀಡಿದ ಉಕ್ತಲೇಖನದಂತೆ ನಾನು ನಿಪಿ.1 ರಂತೆ ದೂರನ್ನು ಬರೆದುಕೊಟ್ಟಿದ್ದೇನೆ ಹೊರತು ನನಗೆ ಅದರಲ್ಲಿ ಬರೆದಿರುವ ಯಾವುದೇ ವಿಷಯಗಳ ಬಗ್ಗೆ ಗೊತ್ತಿಲ್ಲ ಎಂದರೆ ಸರಿ.

38. ನಿಪಿ.8 ಮತ್ತು ನಿಪಿ.9 ರಂತೆ ಅರ್ಜಿಯನ್ನು ಸಲ್ಲಿಸುವ ಕಾಲಕ್ಕಾಗಲೇ ಪ್ರಥಮ ವರ್ತಮಾನ ವರದಿ ದಾಖಲಾಗಿದ್ದರಿಂದ ಅದಕ್ಕೆ ಅನುಗುಣವಾಗುವಂತೆ ಸದರಿ ಅರ್ಜಿಯಲ್ಲಿ ಮಾಹಿತಿಯನ್ನು ನೀಡಿದ್ದೇನೆ ಎಂದರೆ ಸರಿ. ಕಡೂರಿನ ದೊಡ್ಡಪೇಟೆಯಲ್ಲಿ ನಾನು ಆರೋಪಿಯೊಂದಿಗೆ ವಾಸವಾಗಿದ್ದ ಮನೆ ಆರೋಪಿಯ ಅಜ್ಜಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಂತರ ನನ್ನ ಹೆಸರಿಗೆ ಆಗಿದೆ ಎನ್ನುತ್ತಾರೆ. ನಿಮ್ಮ ಮತ್ತು ಆರೋಪಿಯ ಮದುವೆಯ ಸಮಯಕ್ಕೆ ಸದರಿ ಮನೆಯನ್ನು ನಿಮ್ಮ ಹೆಸರಿಗೆ ಬರೆದುಕೊಡುವಂತೆ ಮಾತುಕಥೆಯಾಗಿತ್ತು ಎಂದರೆ ಸರಿ. ಸದರಿ ಮನೆಗೆ ಸಂಬಂಧಿಸಿದಂತೆ ಇ ಖಾತೆ ಆಗದ ಕಾರಣ ಅದನ್ನು ನಿಮ್ಮ ಹೆಸರಿಗೆ ವರ್ಗಾಯಿಸಿಕೊಡುವ ಪ್ರಕ್ರಿಯೆ ತಡವಾಗಿತ್ತು ಎಂದರೆ ಸರಿ. ಸೂಕ್ತ ದಾಖಲೆಗಳು ಬಂದ ಕೂಡಲೇ ಸದರಿ ಮನೆಯನ್ನು ಮದುವೆಯ ಸಮಯದಲ್ಲಿ ಆದ ಮಾತುಕಥೆಯ ಮೇರೆಗೆ ನಿಮ್ಮ ಹೆಸರಿಗೆ ಮಾಡಿಕೊಡಲಾಗಿದೆ ಎಂದರೆ ಸರಿ.

39. ಆರೋಪಿ ನನ್ನನ್ನು ಮದುವೆಯಾದಾಗಿನಿಂದ ಪ್ರೀತಿ, ವಿಶ್ವಾಸದಿಂದ ನನ್ನನ್ನು ನೋಡಿಕೊಂಡು ನನ್ನೊಂದಿಗೆ ಅನ್ಯೂನ್ಯವಾಗಿದ್ದಾನೆ ಎಂದರೆ ಸರಿ. ಆರೋಪಿಗೆ ಸಣ್ಣ ಮಕ್ಕಳು

ಎಂದರೆ ತುಂಬಾ ಪ್ರೀತಿ, ವಿಶ್ವಾಸ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಮ್ಮ ಮಗುವನ್ನು ಪ್ರೀತಿ, ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದನು ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್